ಇ) ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು?

ಈ) ಈ ಉದ್ದೇಶಿತ ಮಾರ್ಕೆಟನ್ನು ಯಾವಾಗ ಪ್ರಾರಂಭಿಸಲಾಗುವುದು?

ಉ) 1995-96ರಲ್ಲಿ ಇದಕ್ಕಾಗಿ ಖರ್ಚು ಮಾಡಲಿರುವ ಹಣವೆಷ್ಟು?

ಊ) ಈ ಉದ್ದೇಶಿತ ಮಾರ್ಕೆಟನಲ್ಲಿ ಒದಗಿಸಲಿರುವ ಸೌಲಭ್ಯಗಳಾವುವು?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು.

ಆ) 100 ಏಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದೆ.

ಇ) ಅಂದಾಜು ಒಟ್ಟು ರೂ. 1,589 ಲಕ್ಷಗಳು.

ಈ) ಭೂಸ್ವಾಧೀನಕ್ಕಾಗಿ ಜಮೀನನ್ನು ಗುರುತಿಸುವ ಹಂತದಲ್ಲಿದ್ದು, ಭೂಸ್ವಾಧೀನ ನಂತರ, ಅವಶ್ಯ ಸೌಲಭ್ಯಗಳನ್ನು ಒದಗಿಸಿ, ಪ್ರಾರಂಭಿಸಬೇಕಾಗುತ್ತದೆ.

ಉ) ಭೂಸ್ವಾಧೀನಕ್ಕಾಗಿ ಜಮೀನು ಗುರುತಿಸುವ ಪ್ರಾರಂಭಿಕ ಹಂತದಲ್ಲಿರುವುದರಿಂದ ಈ ಬಗ್ಗೆ ನಿರ್ಧಾರ ಕೈಗೊಂಡಿಲ್ಲ.

ಊ) ರಸ್ತೆ ವಿದ್ಯುತ್ ಚರಂಡಿ ವ್ಯವಸ್ಥೆ, ಅಂಗಡಿ-ವ-ಮಳಿಗೆಗಳು (50); ವರ್ಗೀಕರಣ ಘಟಕ (2), ಶೀತಲಗೃಹಗಳು (600 ಮೆಟ್ರಿಕ್ ಟನ್ ಸಾಮರ್ಥ್ಯ -1), ಫ್ಯೂಮಿಗೇಷನ್ ಚೆಂಬರ್ಸ (2), ಕ್ರೇಟ್ಸ (500), ತೂಕದ ಯಂತ್ರಗಳು (50), ಸಂಸ್ಕರಣ ಘಟಕಗಳು (2), ಆಡಳಿತ ಕಛೇರಿ: ವಿಶ್ರಾಂತಿ ಗೃಹ (2), ರೆಫ್ರಿಜರೇಟರ್ ಗ್ಯಾಸುಗಳು (5), ಗ್ಯಾಸ್ ಪ್ಲಾಂಟ್ಸ (1) ಒದಗಿಸಲು ಉದ್ದೇಶಿಸಿದೆ

ರಾಜ್ಯದಲ್ಲಿರುವ ಸಬ್-ರಿಜಿಸ್ಟ್ರಾರಗಳ ಕಛೇರಿಗಳಿಗೆ ದೂರವಾಣಿ

2015 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಬ್-ರಿಜಿಸ್ಟ್ರಾರಗಳ ಕಛೇರಿಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಬೆಂಗಳೂರು ನಗರದಲ್ಲಿರುವ ಸಬ್-ರಿಜಿಸ್ಟ್ರಾರ್ ಕಛೇರಿಗಳ ಸಂಖ್ಯೆ ಎಷ್ಟು;

ಇ) ಈ ಎಲ್ಲಾ ಸಬ್-ರಿಜಿಸ್ಟ್ರಾರ್ ಕಛೇರಿಗಳಿಗೆ ದೂರವಾಣಿ ಸೌಲಭ್ಯ ಒದಗಿಸಲಾಗಿದೆಯೇ;

ಈ) ಇಲ್ಲದಿದ್ದಲ್ಲಿ, ಈ ಎಲ್ಲಾ ಕಛೇರಿಗಳಿಗೆ ದೂರವಾಣಿ ಸೌಲಭ್ಯ ಒದಗಿಸಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 199.

ಅ) 11.

ಇ) ಇಲ್ಲ.

ಈ) ಪರಿಶೀಲಿಸಲಾಗುತ್ತಿದೆ.

ಕೆ.ಎಸ್.ಆರ್.ಟಿ.ಸಿ ಸುಧಾರಣೆಗೊಳಿಸಲು ದರ ಪರಿಶೀಲನಾ ಆಯೋಗ

2016 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಪಿ.ಜಿ.ಆರ್. ಸಿಂಧ್ಯರವರ ವರದಿ ಪ್ರಕಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಸುಧಾರಣೆಗೊಳಿಸಲು ದರ ಪರಿಶೀಲನಾ ಆಯೋಗವನ್ನು ನೇಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

1) ಸದ್ಯಕ್ಕೆ ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. .

ತಾತಗುಣಿ ಎಸ್ಟೇಟಿನಲ್ಲಿ ನಿವೇಶನ ಮಾಡುತ್ತಿರುವ ಬಗ್ಗೆ

2017 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾತಗುಣಿ ಎಸ್ಟೇಟ್ ಜಮೀನಿನಲ್ಲಿ ಖಾಸಗಿಯವರು ನಿವೇಶನಗಳನ್ನು ರಚಿಸಲಾಗಿದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸದರಿ ಜಮೀನನ್ನು ರಕ್ಷಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಷ್ಟ್ರೀಯಕೃತ ಮಾರ್ಗಗಳಲ್ಲಿ ಖಾಸಗೀ ಲಕ್ಸುರಿ ಬಸ್ಸುಗಳ ಸಂಚಾರ

2018 - ಶ್ರೀ ಎ.ಟಿ. ರಾಮಸ್ವಾಮಿ (ಆರಕಲಗೂಡು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಷ್ಟ್ರೀಕೃತ ಮಾರ್ಗಗಳಲ್ಲಿ ಖಾಸಗೀ ವಾಹನಗಳು (ಲಕ್ಸುರಿ) ಬಸ್ಸುಗಳು ಸಂಚರಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಅವರಿಗೆ ರಾಜ್ಯದೊಳಗೆ ಒಂದು ಊರಿನಿಂದ ಮತ್ತೊಂದು ಊರಿಗೆ ಸಂಚರಿಸಲು ಸರ್ಕಾರವು ಪರವಾನಗಿ ನೀಡಿದೆಯೇ?